ಬೀದರ್ ಜಿಲ್ಲೆಯಲ್ಲಿನ ಟಿ.ಎ.ಪಿ.ಸಿ.ಎಂ.ಎಸ್. ನಡಿಯಲ್ಲಿ ಭೂಮಿ ಲಭ್ಯ.

1881 (3075); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿನ ಸಹಕಾರ ವ್ಯಾಪ್ತಿಯ ಟಿ.ಎ.ಪಿ.ಸಿ.ಎಂ.ಎಸ್. ಕೆಳಗೆ ಎಷ್ಟು ಭೂಮಿ ಲಭ್ಯವಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ಭಾಲ್ಕಿ ತಾಲ್ಲೂಕಿನಲ್ಲಿ ಕೋಟಿ ರೂ. ಬೆಲೆ ಬಾಳುವ ಭೂಮಿಯು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಒತ್ತುವರಿ ಮಾಡಿರುವವರ ವಿರುದ್ಧ ಕ್ರಮ ಜರುಗಿಸಿ, ಒತ್ತುವರಿಯನ್ನು ತೆರವು ಗೊಳಿಸಲಾಗುವುದೇ;

ಶ್ರೀ ಹೆಚ್. ಎಸ್. ಮಹದೇವ್ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿರುವ 5 ಟಿ.ಎ.ಪಿ.ಸಿ.ಎಂ.ಎಸ್.ಗಳು ಹೊಂದಿರುವ ಭೂಮಿಯ ವಿವರ ತಾಲ್ಲೂಕುವಾರು ಈ ಕಳೆಗಿನಂತಿದೆ.

ಕ್ರ ಸಂ.	ತಾಲ್ಲೂಕದ ಹೆಸರು	ಎಕರೆ	ಗುಂಟೆ	ಜಮೀನು ಹೊಂದಿರುವ ಸ್ಥಳ
01	ಬೀದರ್	–	04	ಗಂಜ ಎರಿಯಾ ಬೀದರ್
02	ಹುಮನಾಬಾದ್	01	12	ಪ್ಲಾಟ ನಂ. 192 ಖಾಲಿ ನಿವೇಶನ ನೂರಖಾ ಅಖಿಡಾ ಅಂಬೇಡ್ಕರ್ ಸರ್ಕಲ್ ಹುಮನಾಬಾದ
03	ಔರಾದ (ಬಿ)	04	08	ಸರ್ಕಾರಿ ಹಿರಿಯ ಪ್ರೌಢ ಶಾಲೆ ಔರಾದ & ಸರ್ಕಾರಿ ಆಸ್ಪತ್ರೆ ಎದುರುಗಡೆ

				ಔರಾದ.
04	ಬಸವಕಲ್ಯಾಣ	–	6.50	ಗಂಜ ಎರಿಯಾ ಬಸವಕಲ್ಯಾಣ
05	ಭಾಲ್ಕಿ	02	07	ರೇಲ್ವೆ ಹಳಿ ಹತ್ತಿರ ಭಾಲ್ಕಿ

ಆ) ಹೌದು–ಭಾಲ್ಕಿ ಟಿ.ಎ.ಪಿ.ಸಿ.ಎಂ.ಎಸ್. ನಿ., ಇದರ ಸರ್ವೆ ನಂ. 202ಎ ನಲ್ಲಿ ಇರುವ 2 ಎಕರೆ 07 ಗುಂಟೆ ಜಮೀನಿನ ಪೈಕಿ 10 ಗುಂಟೆ ಒತ್ತುವರಿಯಾಗಿರುತ್ತದೆ.

ಇ) ಭಾಲ್ಕಿ ಟಿ.ಎ.ಪಿ.ಸಿ.ಎಂ.ಎಸ್. ನಿ., ಇದನ್ನು ದಿನಾಂಕ: 16.01.2013ರಲ್ಲಿ ಸಮಾಪನೆಗೊಳಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ್‌ರವರನ್ನು ಸಮಾಪನಾಧಿಕಾರಿಯಾಗಿ ನೇಮಿಸಲಾಗಿದೆ. ಈ ಸಂಘದ ಸರ್ವೇ ನಂ. 202 ಎ ನಲ್ಲಿ ಇರುವ 2 ಎಕರೆ 07 ಗುಂಟೆ ಜಮೀನಿನ ಪೈಕಿ 10.00 ಗುಂಟೆ ಜಮೀನಿನಲ್ಲಿ (1) ಶ್ರೀಮತಿ ಸರಸ್ವತಿ ಕೋಂ ವಿಶ್ವನಾಥ್ ಸೂರ್ಯವಂಶಿ (2) ಶ್ರೀ ಕೇಶವ ಬಿನ್ ಲೇಟ್ ವಿಶ್ವನಾಥ್ ಸೂರ್ಯವಂಶಿ (3) ಶ್ರೀ ಶಿವಾಜಿ ಬಿನ್ ಲೇಟ್ ವಿಶ್ವನಾಥ್ ಸೂರ್ಯವಂಶಿ ಎಂಬುವವರು ಟೆನ್ ಶೆಡ್ ಹಾಗೂ ಸೀಮೆಂಟ್ ಫೂಲ್ ಅನಧಿಕೃತವಾಗಿ ಹಾಕಿಕೊಂಡಿದ್ದು, ಸದರಿಯವರು ಕಾನೂನು ಬಾಹಿರವಾಗಿ ಮಾಡಿದ ಭೂ ಕಬಳಿಕೆಯನ್ನು ಖಾಲಿ ಮಾಡಿಸಿ ಕೊಡುವಂತೆ ಈ ಸಂಘದ ಪಮಾಪನಾಧಿಕಾರಿಗಳು ದಿನಾಂಕ: 10.01.2014 ಹಾಗೂ 16.06.2014ರ ಮೂಲಕ ಆರಕ್ಷಕ ನಿರೀಕ್ಷಕರು, ಪೊಲೀಸ್ ಠಾಣೆ ಭಾಲ್ಕಿ ಹಾಗೂ ತಹಸೀಲ್ದಾರ ಭಾಲ್ಕಿ ಇವರಿಗೆ ಕಾನೂನಿನ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. ಸದರಿ ವಿಷಯ ವನ್ನು ಜಿಲ್ಲಾಧಿಕಾರಿಗಳು ಬೀದರ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾ ಧಿಕಾರಿ, ಬೀದರ್ ಇವರುಗಳ ಗಮನಕ್ಕೂ ಸಹ ತಂದು ಅನಧಿಕೃತ ಒತ್ತುವರಿಯನ್ನು ತೆರವು ಮಾಡಿಸಲು ಕೋರಿರುತ್ತಾರೆ.